# ಎರಡು ಹಿಂದಿ ಕಥೆಗಳು



ಇಡೀ ವಿಶ್ವದಲ್ಲಿ ಯಮದೂತನ ಪ್ರತಿನಿಧಿಗಳ ಹಾಗೆ ಕೊರೊನಾ ವೈರಸ್ ಹರಡುತ್ತಿರುವ ಮತ್ತು ದೇಶದಲ್ಲಿ ಕರ್ಫ್ಯೂ ಹಾಗೂ ಲಾಕ್‌ಡೌನ್‌ನ ಭರಾಟೆಯಲ್ಲಿ ವಿಚಲಿತರಾಗಿ ಭಯ ಮತ್ತು ಹಸಿವಿನಿಂದ ಒದ್ದಾಡುತ್ತಿದ್ದ ಎರಡು ಮಂಗಗಳು ತಮ್ಮನ್ನು ಕುಣಿಸುವ ದೊಂಬರನ ಮನೆಯಿಂದ ತಪ್ಪಿಸಿಕೊಂಡು ಕಾಡಿಗೆ ಓಡಿಹೋದವು. ಅಲ್ಲಿ ತಮ್ಮ ಬಂಧುಬಳಗದೊಂದಿಗೆ ಅತ್ಯಂತ ದುಃಖಿತರಾಗಿ ತಮ್ಮ ನೋವನ್ನು ತೋಡಿಕೊಳ್ಳುತ್ತಾ ಸದ್ಯದ ದಾರುಣ ಪರಿಸ್ಥಿತಿಯನ್ನು ವಿವರಿಸಿದವು.

ವಿಶ್ವದ ಈಗಿನ ದಯನೀಯ ಸ್ಥಿತಿಯ ಬಗ್ಗೆ ಚಿಂತಿತರಾಗಿ ಕ್ರೋಧದಿಂದ ಎಲ್ಲ ಮಂಗಗಳು ಒಂದು ಅಜೆಂಡಾವನ್ನು ತಯಾರು ಮಾಡಿದವು. ಅದರಲ್ಲಿ ಮೊದಲನೆಯದು: ಎಲ್ಲವೂ ರಾಜ್‌ಘಾಟ್‌ಗೆ ಹೋಗಿ ಅಲ್ಲಿ ಬಾಪೂಜಿಯ ಜೊತೆ ಮೌನವಾಗಿ ಕುಳಿತು ತಮ್ಮ ಕೈಗಳನ್ನು ಕಾಯಂ ಆಗಿ ಬಂಧಿಸಿಕೊಂಡಿರುವ ಮೂರು ಮಂಗಗಳನ್ನು ವಾಪಸ್ಸು ಕರೆತರುವುದು. ಎರಡನೆಯದಾಗಿ: ಡಾರ್ವಿನ್‌ನ ಸಮಾಧಿಯ ಬಳಿ ಹೋಗಿ ಧರಣಿ ಕುಳಿತು ಆತನನ್ನು ಆಗ್ರಹಿಸುವುದು – 'ಹೇ ಡಾರ್ವಿನ್, ನೀವು ನಿಮ್ಮ ವಿಕಾಸವಾದದ ಸಿದ್ಧಾಂತದಲ್ಲಿ 'ಮನುಷ್ಯ ಮಂಗನ ವಿಕಸಿತ ರೂಪ' ಎಂದು ಬರೆದಿದ್ದೀರಿ. ನೀವು ಈಗ ಅದನ್ನು ಪುನರ್ ಸಂಶೋಧಿಸಿ ಮನುಷ್ಯ ಮಂಗನ ವಿಕೃತ ರೂಪ' ಎಂದು ಬರೆಯಬೇಕು ಎಂಬುದಾಗಿ ಒತ್ತಾಯಿಸುವುದು.

ಎಲ್ಲ ಮಂಗಗಳೂ ಏಕಸ್ವರದಲ್ಲಿ ತಮ್ಮ ಸಮ್ಮತಿಯನ್ನು ಸೂಚಿಸಿದವು. ಅದಾದ ಬಳಿಕ ಎಲ್ಲವೂ ರಾಜ್‌ಘಾಟ್‌ಗೆ ತೆರಳುವ ತಯಾರಿಯಲ್ಲಿ ಮಗ್ನವಾದವು.

**■ ಕನ್ನಡಕ್ಕೆ: ಎಚ್.ಎಂ. ಕುಮಾರಸ್ವಾಮಿ**

ಸಂಶೋಧನೆ, ಹಿಂದಿ ಮೂಲ: ರಾಮ್ ಪಟವಾ

ಅಯೋಧ್ಯೆಯಲ್ಲಿ ರಾಮಲಲ್ಲಾ ಮಂದಿರದ ಸಮೀಪದಲ್ಲೇ ಹೋಗುತ್ತಿದ್ದೆ. ಅಲ್ಲೇ ಪಕ್ಕದಲ್ಲಿ ಈಶ್ವರ ಮತ್ತು ಅಲ್ಲಾ ಇಬ್ಬರೂ ಮಾತುಕತೆ ನಡೆಸುತ್ತಿರುವ ಹಾಗೆ ನನಗೆ ಭಾಸವಾಯಿತು.

ಗಮನವಿಟ್ಟು ಕೇಳಿದೆ. ಈಶ್ವರ ಹೇಳುತ್ತಿದ್ದರು: 'ಇಂದು ಈ ಮನುಷ್ಯನಿಗೆ ಏನಾಗಿದೆ? ಈಗ ಆತ ನಮ್ಮ ಮತ್ತು ನಿಮ್ಮ ಹಿಂದೆ ಬಿದ್ದುಬಿಟ್ಟಿದ್ದಾನೆ. ನಮ್ಮಿಬ್ಬರ ನಡುವೆ ಜಗಳ ತಂದು ಹಾಕುವಲ್ಲಿ ನಿರತನಾಗಿದ್ದಾನೆ. ನಾವಂತೂ ಎಲ್ಲಾ ಜಾತಿ–ಧರ್ಮವನ್ನು ಒಪ್ಪಿಕೊಳ್ಳುತ್ತೇವೆ. ಆದರೆ ಮನುಷ್ಯರು ಇದರಲ್ಲಿ ಭೇದಭಾವ ಉಂಟುಮಾಡಿ ಸಾಯಲುಸಾಯಿಸಲು ಮುಂದಾಗಿದ್ದಾರೆ'.

ಅಲ್ಲಾ ಹೇಳಿದರು: 'ನಿಮ್ಮ ಮಾತು ಸತ್ಯ. ಸಮಸ್ತ ದೇಶದಲ್ಲಿ ಮಂದಿರ ಮಸೀದಿಗಳು ಅಕ್ಕಪಕ್ಕದಲ್ಲೇ ಇವೆ. ಇವುಗಳನ್ನು ನಿರ್ಮಾಣ ಮಾಡುವಾಗ ಅವರ ಮನಸ್ಸಿನಲ್ಲಿ ಇದೇ ರೀತಿಯ ಭಾವನೆ ಇದ್ದಿದ್ದೇ ಆಗಿದ್ದಿದ್ದರೆ ಅವರು ಇವುಗಳ ನಿರ್ಮಾಣ ಮಾಡುತ್ತಿದ್ದರೆ? ಆದರೆ ಆಯೋಧ್ಯೆಯ ವಿಷಯವನ್ನು ಮುಂದುಮಾಡಿಕೊಂಡು ಜನರು ಯಾಕಿಷ್ಟು ಉದ್ವಿಗ್ನರಾಗಿದ್ದಾರೆ?

'ಈಶ್ವರಅಲ್ಲಾ ತೆರೇನಾಮ್, ಸಬ್‌ಕೋ ಸನ್ಮತಿ ದೇ ಭಗವಾನ್ ಎಂದು ಪ್ರಾರ್ಥನೆ ಮಾಡುತ್ತಾರೆ. ಮತ್ತೊಂದು ಕಡೆ ಹಿಂದೂಮುಸ್ಲಿಮರನ್ನು ಬೇರೆಬೇರೆ ಮಾಡುವ ಕೆಲಸದಲ್ಲಿ ನಿರತರಾಗಿದ್ದಾರೆ'.

ಈಶ್ವರ ಹೇಳಿದರು: 'ಮತ್ತೆ ಈ ಸಾಧುಸಂತರಿಗೆ ಏನಾಗಿ ಹೋಗಿದೆ? ಅವರು ಕೂಡ ಜನರನ್ನು ಸಮಾಧಾನಪಡಿಸುವ ಬದಲಾಗಿ ಮಂದಿರವನ್ನು ಇಲ್ಲೇ ಕಟ್ಟುತ್ತೇವೆ ಎಂದ ಬೊಬ್ಬೆ ಹೊಡೆಯುತ್ತಿದ್ದಾರೆ. ಅವರ ಇಂತಹ ಕಾರ್ಯದಿಂದ ಜನಸಾಮಾನ್ಯರಿಗೆ ಎಷ್ಟು ತೊಂದರೆ ಆಗುತ್ತೆ ಎಂದು ಅವರಿಗೆ ಏಕೆ ಅರ್ಥವಾಗುವುದಿಲ್ಲ? ನನ್ನ ಅಭಿಪ್ರಾಯದಲ್ಲಿ ಮಂದಿರ ಮತ್ತು ಮಸೀದಿ ಬಗ್ಗೆ ನಂಬಿಕೆ ಇರುವವರು ಆಯಾಯ ಸ್ಥಳಗಳಲ್ಲಿಯೇ ತಮ್ಮ ಪ್ರಾರ್ಥನೆ, ಪೂಜೆ, ನಮಾಜು ಸಲ್ಲಿಸಲಿ. ಅದುಬಿಟ್ಟು ಈ ವಿವಾದ, ಸಂಘರ್ಷ ಹುಟ್ಟುಹಾಕುವುದರ ಆವಶ್ಯಕತೆ ಏನಿದೆ?'

ಅಲ್ಲಾ ಹೇಳಿದರು: 'ಇದೆಲ್ಲ ಚುನಾವಣೆ ಸಮಯದ ರಾಜಕೀಯ' ಎಂದು ಜನರು ಮಾತಾಡಿಕೊಳ್ಳುವುದನ್ನು ನಾನು ಕೇಳಿದ್ದೇನೆ. ಆದರೆ ಅವರಿಗೆ ಧರ್ಮದ ಬಗ್ಗೆ ಆಗಲಿ, ನಂಬಿಕೆಯ ಬಗ್ಗೆ ಆಗಲಿ ಯಾವ ಸಂಬಂಧವೂ ಬೇಕಿಲ್ಲ.

ಇಬ್ಬರೂ ನಕ್ಕರು.

ಈಶ್ವರ ಹೇಳಿದರು: 'ಈ ಚುನಾವಣೆಗಳಿಂದ ನಮಗೇನಾಗಬೇಕಿದೆ'

ಅಲ್ಲಾ ಹೇಳಿದರು: 'ಸರಿಯಾಗಿಯೇ ಹೇಳಿದಿರಿ ನೀವು'.

ಕೊನೆಗೆ ಇಬ್ಬರೂ ತಮ್ಮ ತಮ್ಮ ನಿವಾಸದ ಕಡೆಗೆ ಹೊರಟರು. ಹೋಗುವಾಗ ಅಲ್ಲಾರವರು 'ಜೈ ಶ್ರೀರಾಮ್' ಎಂದು ಹೇಳಿದ್ದು ಹಾಗೂ ಈಶ್ವರರು 'ಯಾ ಅಲ್ಲಾಹ್' ಎಂದು ಹೇಳಿದ್ದು ನನಗೆ ಕೇಳಿಸಿತು.

ಇದನ್ನೇ ಯೋಚಿಸುತ್ತಾ ನಾನು ಮುಂದಕ್ಕೆ ಹೆಜ್ಜೆ ಹಾಕಿದೆ.

**■ ಈಶ್ವರಅಲ್ಲಾ ತೆರೇನಾಮ್**

ಹಿಂದಿ ಮೂಲ: ಪುಷ್ಪಾಖರೆ